# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ., ನ್ಯಾಯಾಲಯ, ನವಲಗುಂದ.

## ಸಿ .ಸಿ. ನಂಃ 102/2024

**ಸಿ.ಡಬ್ಲೂ: 10**

**ಪಿ.ಡಬ್ಲೂ: 07**

| | | |
|---|---|---|
| **ಹೆಸರು** | :- | **ಡಾಃ ರೇಖಾ** |
| **ವಯಾ** | :- | **36 ವರ್ಷ** |
| **ಉದ್ಯೋಗ** | :- | **ಸಹಾಯಕ ಪ್ರಾಧ್ಯಾಪಕರು, ಕೆ ಎಲ್ ಇ ಕಾಲೇಜ್, ಹುಬ್ಬಳ್ಳಿ** |
| **ವಾಸ ಸ್ಥಳ** | :- | **ಹುಬ್ಬಳ್ಳಿ** |
| **ಸತ್ಯ ಪ್ರತಿಜ್ಞೆ ಮೇರೆಗೆ** | :- | **ದಿನಾಂಕಃ 17-07-2026** |

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ ರವರಿಂದ**

ನಾನು ದಿನಾಂಕಃ 17-09-2021 ರಿಂದ 15-04-2022 ರವರೆಗೆ ವೈದ್ಯಾಧಿಕಾರಿ ಎಂದು ನವಲಗುಂದ ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸಿರುತ್ತೇನೆ.

2. ದಿನಾಂಕ 22.07.2021 ಬೆಳಿಗ್ಗೆ 10.30 ಚಾಸಾ-1 ರವರು ಹೊಡೆದಾಟದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದು ಪರಿಕ್ಷೀಸಲಾಗಿ ಕೆಳಕಂಡ ಗಾಯಗಳು ಕಂಡು ಬಂದವು.

1. Tenderness over left shoulder and all over body.

3. ನಂತರ ಸದರಿ ದಿನ ಬೆಳಿಗ್ಗೆ 10.30 ಚಾಸಾ-4 ರವರು ಹೊಡೆದಾಟದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದು ಪರಿಕ್ಷೀಸಲಾಗಿ ಕೆಳಕಂಡ ಗಾಯಗಳು ಕಂಡು ಬಂದವು.

1. Tenderness over left shoulder.

4. ನಂತರ ಸದರಿ ದಿನ ಬೆಳಿಗ್ಗೆ 10.30 ಚಾಸಾ-5 ರವರು ಹೊಡೆದಾಟದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದು ಪರಿಕ್ಷೀಸಲಾಗಿ ಕೆಳಕಂಡ ಗಾಯಗಳು ಕಂಡು ಬಂದವು.

1. Tenderness over hands.

ಮೇಲೆ ಹೆಳಿದ ಎಲ್ಲಾ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದು, ಆ ಬಗ್ಗೆ ನಾನು ಗಾಯದ ಪ್ರಮಾಣ ಪತ್ರಗಳನ್ನು ನೀಡಿದ್ದು ಅವುಗಳನ್ನು ನೋಡುತ್ತಿದ್ದು **ನಿ ಪಿ 7 ರಿಂದ 9** ಮತ್ತು ಸಹಿಗಳನ್ನು **ನಿ ಪಿ 7 (ಎ) ಯಿಂದ 9(ಎ)** ಎಂದು ಗುರುತಿಸಲಾಯಿತು. ನಿ.ಪಿ.7 ರಿಂದ 9 ರಲ್ಲಿ ನಮೂದಿಸಿದ ಗಾಯಗಳು ಒಬ್ಬ ವ್ಯಕ್ತಿಗೆ ಕೈಯಿಂದ ಅಥವಾ ಬಡಿಗೆಯಿಂದ ಹೊಡೆದರೆ ಆಗುವ ಸಂಭವವಿದೆ ಎಂದರೆ ಸರಿ.

**<u>ಪಾಟೀ ಸವಾಲು ಶ್ರೀ ಎನ್ ವಾಯ್ ಎಚ್ ವಕೀಲರಿಂದಃ</u>**

ಮೇಲೆ ಹೇಳಿದ ಗಾಯಗಳು ಒಬ್ಬ ವ್ಯಕ್ತಿ ಹೊಲದಲ್ಲಿ ಕೆಲಸ ಮಾಡಿದರೆ ಆಗುವ ಸಂಭವವಿದೆ ಎಂದೆರ ಸರಿ. ಒಬ್ಬ ವ್ಯಕ್ತಿ ಟ್ರ್ಯಾಕ್ಟರ್ ಅಥವಾ ಚಕ್ಕಡಿಯಿಂದ ಬಿದ್ದರೆ ಮೇಲೆ ಹೇಳಿದ ಗಾಯಗಳು ಆಗುವ ಸಂಭವವಿದೆ ಎಂದರೆ ಸರಿ. ನಾನು ಚಾಸಾ 1, 4 ಮತ್ತು 5 ರವರಿಗೆ ಯಾವುದೇ ಚಿಕಿತ್ಸೆಯನು ನೀಡಿಲ್ಲದಿದದ್ದರೂ ಪೋಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**